# ಶ್ರೀ ಕೃಷ್ಣಾಯ ನಮ:

ಶ್ರೀ ಹರಿವಾಯುಗಳ ಪ್ರೇರಣೆಯಿಂದ ಮತ್ತು ನಮ್ಮ ಪೂಜ್ಯ ಗುರುಗಳಾದ ಪಂಡಿತ್ ಕರ್ನೂಲ್ ಶ್ರೀನಿವಾಸಾಚಾರ್ ರವರ ಆಶೀರ್ವಾದದಿಂದ ದಿನಾಂಕ:13–11–2016 ರಿಂದ 28–11–2016 ರವರೆಗೆ ಮಥುರ, ವೃಂದಾವನ ಗೋಕುಲದಲ್ಲಿ "ಶ್ರೀ ಕೃಷ್ಣಲೀಲಾ" ಎಂಬ ಜ್ಞಾನಸತ್ರವನ್ನು ಶ್ರೀಮತಿ ಶ್ಯಾಮಲ ಶ್ರೀನಿವಾಸ್ ರವರ ನೇತೃತ್ವದಲ್ಲಿ ಏರ್ಪಡಿಸಲಾಗಿದೆ.

ಶ್ರೀ ಪೂಜ್ಯ ಗುರುಗಳು ದಶಮ ಸ್ಕಂದ ಭಾಗವತ, ಪುರಾಣಗಳು, ಉಪನಿಷತ್‌ಗಳು, ವಾದಿರಾಜ ಸ್ತೋತ್ರ ಮತ್ತು ದಾಸ ಸಾಹಿತ್ಯದಲ್ಲಿ ಬರುವ ಶ್ರೀಕೃಷ್ಣನ ಲೀಲೆಯನ್ನು ವಿಸ್ತಾರವಾಗಿ ಹೇಳಲಿದ್ದಾರೆ.

ಇನ್ನೊಂದು ವಿಶೇಷ ಸಂಗತಿ ಏನೆಂದರೆ ನಾವು "ಚಾವಸಿ ಕೋಸ್ ಬ್ರಜ್ ಯಾತ್ರಾ ದರ್ಶನ್" ಮಾಡಬೇಕೆಂದಿದ್ದೇವೆ. ಚಾವಸಿ ಅಂದರೆ 84 ಕೋಸ್ (1 ಕೋಸಿಗೆ 3 ಕಿ.ಮೀ) ಅಂದರೆ ಸುಮಾರು 250 ಕಿ.ಮೀ) ಅಷ್ಟು ಬ್ರಜ್ ಭೂಮಿಯ ದರ್ಶನವನ್ನು ಮಾಡಲಿದ್ದೇವೆ. ಬ್ರಜ್ ಭೂಮಿ ಅಂದರೆ ಶ್ರೀಕೃಷ್ಣ ಪರಮಾತ್ಮ ಓಡಾಡಿದ ಮತ್ತು ಅನೇಕ ಲೀಲೆಯನ್ನು ತೋರಿದ ಸ್ಥಳಗಳನ್ನು ದರ್ಶನ ಮಾಡಲಿದ್ದೇವೆ. ಅದರ ವಿವರವನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಈ ಕಾರ್ಯಕ್ರಮವು ಪ್ರತಿನಿತ್ಯ ಸುಮಾರು 6–8 ಗಂಟೆ ಕಾಲಗಳ ಯಾತ್ರೆಯಾಗಿರುತ್ತದೆ. ಪ್ರವಚನ ಹಾಲಿನಲ್ಲಿ ಬೆಳಿಗ್ಗೆ ಪ್ರವಚನ, ತೀರ್ಥ ಪ್ರಸಾದ, ಮತ್ತೆ ಸ್ವಲ್ಪ ವಿಶ್ರಾಂತಿಯ ನಂತರ ಅಂದರೆ ಸುಮಾರು ಮಧ್ಯಾಹ್ನ 1.30 ರಿಂದ ರಾತ್ರಿ 8–9 ಗಂಟೆಯವರೆಗೂ ವಿವಿಧ ಸ್ಥಳಗಳ ದರ್ಶನವಿರುತ್ತದೆ. ಆ ಸ್ಥಳದ ಮಹಿಮೆಯನ್ನು ಪೂಜ್ಯ ಆಚಾರ್ ರವರು ಸಂಕ್ಷಿಪ್ತವಾಗಿ ಹೇಳಲಿದ್ದಾರೆ. ಉದಾಹರಣೆ: ಕಾಳಿಂಗ ಮರ್ದನದ ಸ್ಥಳದಲ್ಲಿ ಕಾಳಿಂಗ ಮರ್ದನ ಮಾಡಿದ ವಿಷಯವನ್ನು ತಿಳಿಸಲಿದ್ದಾರೆ. ಈ ಯಾತ್ರೆಗೆ ಒಬ್ಬರಿಗೆ 8,000 ರೂಪಾಯಿಗಳಾಗುತ್ತವೆ. ಈಗ ನಿಮ್ಮ ಹೆಸರನ್ನು ಮಾತ್ರ ಬರೆಸಬೇಕು. ಆಮೇಲೆ ನಿಗದಿತ ಸಮಯದಲ್ಲಿ ಹಣ ಕೊಡಬೇಕಾಗುತ್ತದೆ.

ಗೋಕುಲ ಮತ್ತು ವೃಂದಾವನದಲ್ಲಿ ಇಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ. ಇದಕ್ಕೆ ಹಣವನ್ನು ಒಬ್ಬರಿಗೆ 5,000 ರೂಪಾಯಿಗಳಂತೆ (14 ದಿನಕ್ಕೆ ವಸತಿ) ಈಗಲೇ ಕೊಡಬೇಕು. ಆ ಸಮಯ ಕಾರ್ತಿಕ ಮಾಸವಾದುದರಿಂದ ಅಲ್ಲಿ ಇಳಿದುಕೊಳ್ಳುವುದಕ್ಕೆ ರೂಮುಗಳು ಸಿಗುವುದು ತುಂಬಾ ಕಷ್ಟ ಆದ್ದರಿಂದ ನಾವು ಹಣವನ್ನು ಈಗಲೇ ಕಟ್ಟಬೇಕಾಗಿದ್ದು, ಈ ಹಣವನ್ನು ಏಪ್ರಿಲ್ 20 ರವರೆಗೆ ಯಾರು ಕೊಡುತ್ತಾರೋ ಅವರಿಗೆ ಮಾತ್ರ ವಸತಿ ಅನುಕೂಲವಿರುತ್ತದೆ. ಇದಾದ ನಂತರ ಯಾರು ಬೇಕಾದರೂ ಪ್ರವಚನ ಮತ್ತು ತೀರ್ಥ ಪ್ರಸಾದಕ್ಕೆ ಬರಬಹುದು, ಆದರೆ ಇಳಿದುಕೊಳ್ಳುವುದಕ್ಕೆ ಸ್ಥಳದ ವ್ಯವಸ್ಥೆ ಇರುವುದಿಲ್ಲ. ಯಾರಿಗೆ ವಸತಿ ಬೇಕೋ ಅವರು ಹಣವನ್ನು ಶ್ರೀಮತಿ ಸಾವಿತ್ರಿ ರಾಘವೇಂದ್ರರಾವ್ ರವರಿಗೆ ತಲುಪಿಸಬೇಕು. ಅವರ ಫೋನ್ ನಂ.09740233336.

ಟ್ರಾವೆಲ್ಸ್ ಟೂರ್ಸ್ ನಲ್ಲಿ ಟ್ರೈನ್ ಮತ್ತು ಫ್ಲೈಟ್ ಟಿಕೆಟ್‌ಗಳನ್ನು ಖರೀದಿಸಲು ಸತೀಶ್ ಅನ್ನುವವರನ್ನು ಸಂಪರ್ಕಿಸಿ. ಅವರ ಫೋನ್ ನಂ.80448 00800 / 80448 800862. ಈಗಾಗಲೇ ಸುಮಾರು 30–40 ಜನ **GO AIR** 8:15 ಗೆ ನವೆಂಬರ್ 13 ರಂದು ಬುಕ್ ಮಾಡಿದ್ದಾರೆ. ಫ್ಲೈಟ್ 11 ಗಂಟೆಗೆ ದೆಹಲಿಗೆ ತಲುಪುತ್ತದೆ. ಇದರಲ್ಲಿ ಪೂಜ್ಯ ಆಚಾರ್ ರವರೂ ಇರುತ್ತಾರೆ. ದೆಹಲಿಯಿಂದ ಬಸ್ ಮಾಡಲಾಗಿದೆ. ಯಾರು ಯಾರು ಈ ಫ್ಲೈಟ್‌ನಲ್ಲಿ ಅಥವಾ ಅದಕ್ಕಿಂತ ಮುಂಚೆ ಬರುವ ಫ್ಲೈಟ್‌ನಲ್ಲಿ

ಬರುತ್ತಾರೋ ಅವರಿಗೆ ಬಸ್ ಮಾಡಲಾಗಿದೆ. ಗೋಕುಲದಲ್ಲಿ ತೀರ್ಥ ಪ್ರಸಾದದ ವ್ಯವಸ್ಥೆ ಆಗಿರುತ್ತದೆ. ದೆಹಲಿಯಿಂದ ಗೋಕುಲ್‌ಗೆ ಸುಮಾರು 3 ಗಂಟೆ ಕಾಲ ಪ್ರಯಾಣ. ಆದುರಿಂದ ನಿಮ್ಮ ಫ್ಲೈಟ್ ತಡವಾಗಿ ಬಂದರೆ ನೀವೇ ಗೋಕುಲ್‌ಗೆ ಬರಬೇಕಾಗಿ ವಿನಂತಿ. ಅಲ್ಲಿಯ ವಿಳಾಸವನ್ನು ಮುಂದೆ ಕೊಡಲಾಗುತ್ತದೆ.

ಟ್ರೈನ್‌ನಲ್ಲಿ ಟಿಕೆಟ್‌ಗಳು ಇನ್ನೂ ಪ್ರಾರಂಭವಾಗಿಲ್ಲ. ಅದರ ವಿವರವನ್ನು ಮುಂದೆ ತಿಳಿಸುತ್ತೇವೆ. ಟ್ರೈನ್‌ನಲ್ಲಿ ಬರುವವರು ಮುಂದೆ ಶ್ರೀನಿವಾಸ ರಾವ್ ಅವರನ್ನು ಸಂಪರ್ಕಿಸಿ. (ಫೋನ್ ನಂ:8892072990)

## ಕಾರ್ಯಕ್ರಮದ ವಿವರಗಳು

| | | |
|---|---|---|
| ನವೆಂಬರ್ 13–17 ರವರೆಗೆ | -- | ಗೋಕುಲ |
| ನವೆಂಬರ್ 13 ಬೆಳಿಗ್ಗೆ | -- | ತೀರ್ಥಪ್ರಸಾದ, ವಿಶ್ರಾಂತಿ ನಂತರ ಮಥುರಾದಲ್ಲಿ ಪ್ರವಚನ |
| ನವೆಂಬರ್ 14 | -- | ಗೋಕುಲದಲ್ಲಿ ಧಾತ್ರಿ ಹವನ, ತೀರ್ಥಪ್ರಸಾದ, ವಿಶ್ರಾಂತಿ ನಂತರ ಮಥುರಾದಲ್ಲಿ ಪ್ರವಚನ ಮತ್ತು ಗೋವರ್ಧನ ಪರಿಕ್ರಮ |
| ನವೆಂಬರ್ 17–28 | -- | ವೃಂದಾವನ |
| ನವೆಂಬರ್ 22 | -- | ಗೋಪಾಷ್ಟಮಿ / ಗೋವರ್ಧನ ಪೂಜೆ |
| ನವೆಂಬರ್ 28 | -- | ಮಂಗಳ |

ನವೆಂಬರ್ 28 ಮಂಗಳವಾರ ಸಾಯಂಕಾಲ 5.30 ಗಂಟೆಗೆ ದೆಹಲಿಯಿಂದ ಬೆಂಗಳೂರಿಗೆ ಪ್ರಯಾಣ

ಸೂಚನೆ:– ನೀವು ನಿಮ್ಮ ಫ್ಲೈಟ್ ಅನ್ನು ನೀವೇ ಮಾಡಿಕೊಂಡಿದ್ದ ಪಕ್ಷದಲ್ಲಿ ಮತ್ತು ನಿಮಗೆ ದೆಹಲಿ ಏರ್‌ಪೋರ್ಟ್‌ನಿಂದ ಗೋಕುಲ್‌ಗೆ ಹೋಗುವುದಕ್ಕೆ ಬಸ್ ಬೇಕಾಗಿದ್ದಲ್ಲಿ ನೀವು ಶ್ರೀಮತಿ ಸಾವಿತ್ರಿ ರಾಘವೇಂದ್ರರಾವ್ ಅಥವಾ ಶ್ರೀಮತಿ ಶ್ಯಾಮಲ ಶ್ರೀನಿವಾಸ್ ರವರನ್ನು ಸಂಪರ್ಕಿಸಬೇಕು (ಫೋನ್ ನಂ.9448276468)